ದಿನಾಂಕ 31-10-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-

| | |
|---|---|
| ನಿಪಿ-12 | ನನ್ನ ಪತಿ ಮೃತ ಮನು ರವರ ಮರಣ ಪ್ರಮಾಣ ಪತ್ರ |

ಮೇಲ್ಕಂಡ ದಾಖಲೆಯನ್ನು ಕ್ರಮವಾಗಿ ನಿಪಿ-12 ಎಂದು ಗುರುತಿಸಲಾಯಿತು. ಅರ್ಜಿಯನ್ನು ಪುರಸ್ಕರಿಸುವಂತೆ ಕೋರುತ್ತೇನೆ.

ಪಾಟೀ ಸವಾಲುಃ ಶ್ರೀ ಎನ್ ಎನ್ ವಕೀಲರಿಂದಃ-

ನನ್ನ ಪತಿ ಮೃತ ಮನುರವರಿಗೆ ತೀರಿಕೊಳ್ಳುವ ಕಾಲಕ್ಕೆ 29 ವರ್ಷ ವಯಸ್ಸು ಆಗಿತ್ತು. ಅವರ ಆಧಾರ ಕಾರ್ಡ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ಪತಿ ಮೃತ ಮನುರವರು ದ್ವಿತೀಯ ಪಿಯುಸಿ ವರೆಗೆ ಕಲಿತಿದ್ದರು. ನಾನು ನ್ಯಾಯಾಲಯಕ್ಕೆ ವಂಶ ವೃಕ್ಷ ಹಾಜರುಪಡಿಸಿದ್ದೇನೆ. ನಮ್ಮ ಕುಟುಂಬದ ಪಡಿತರ ಚೀಟಿ ಮಾಡಿಸಿರುವುದಿಲ್ಲ. ಮೃತ ಮನುರವರು ನನ್ನ ಪತಿಯೇ ಅಲ್ಲ, ಆದ್ದರಿಂದಲೇ ಪಡಿತರ ಚೀಟಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಅರ್ಜಿಯಲ್ಲಿ ಹೇಳಿರುವ ವಾಹನದಿಂದಲೇ ಅಪಘಾತ ಆಗಿದೆ ಎಂದು ನನಗೆ ನನ್ನ ಮೈದುನ ಹೇಳಿದರು. ನನ್ನ ಮೈದುನ ಅಪಘಾತ ಆದ ತಕ್ಷಣ ಸ್ಥಳಕ್ಕೆ ಬಂದರು. ಅಪಘಾತ ಆದ ಕಾಲಕ್ಕೆ ನನ್ನ ಮೈದುನ ಅಪಘಾತ ಆದ ಸ್ಥಳಕ್ಕೆ ಸ್ವಲ್ಪ ಸಮೀಪದಲ್ಲಿಯೇ ಇದ್ದರು, ಅವರ ವಾಸ ಮದ್ದೂರು ಬಳಿ ಕುಳಿಗೆರೆ ಗ್ರಾಮದಲ್ಲಿ.

ಅಪಘಾತ ಆದದ್ದು ದಿನಾಂಕಃ 20.02.2024ರಲ್ಲಿ. ಅಪಘಾತ ಆದ ದಿವಸ ನನ್ನ ಪತಿ ಮನೆಯಿಂದ ಬೆಳಿಗ್ಗೆ 8.00 ಗಂಟೆಗೆ ಹೊರಟರು. ಅವರು ಹೊರಟ ಬುಲೆರೊ ಕಾರು ವಾಹನದ ಸಂಖ್ಯೆ ಕೆಎ 6257, ಅದರ ಮಾಲೀಕರು ನನ್ನ ಪತಿಯೇ. ಸದರಿ ವಾಹನಕ್ಕೆ ಇನ್ಸುರೆನ್ಸ್ ಇತ್ತು. ಪೊಲೀಸರು ಸದರಿ ವಾಹನಕ್ಕೆ ವಿಮೆ ಇರಲಿಲ್ಲ ಎಂದು ದೋಷಾರೋಪಣ ಪತ್ರ ಸಲ್ಲಿಸಿದ್ದಾರೆಂದರೆ ಮಾಹಿತಿ

ಇಲ್ಲ. ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದವರನ್ನು ವಿಚಾರಣೆ ಮಾಡಿಸಬಹುದಾ ಅಂದರೆ ಸಾಕ್ಷಿ, ಪೊಲೀಸರು ನೋಡಿದ್ದಾರೆಂದು ನುಡಿಯುತ್ತಾರೆ. ಪೊಲೀಸರು ದೋಷಾರೋಪಣ ಪತ್ರದಲ್ಲಿ ನನ್ನ ಪತಿ ಮನುರವರೇ ಅವರ ವಾಹನದಲ್ಲಿ ಹೋಗಿ ಐ-10 ವಾಹನಕ್ಕೆ ಡಿಕ್ಕಿ ಹೊಡೆದಿದ್ದಾರೆಂದು ಹೇಳಿದ್ದಾರೆಂದರೆ ಸರಿಯಲ್ಲ. ಅಪಘಾತ ಆದ ವಿಚಾರ ನನಗೆ ಬೆಳಿಗ್ಗೆ 9.45 ಕ್ಕೆ ಗೊತ್ತಾಯಿತು.

ಅಪಘಾತ ಆದ ನಂತರ ನನ್ನ ಪತಿಯ ಮೃತ ದೇಹವನ್ನು ಆಸ್ಪತ್ರೆಯಲ್ಲಿ ನೋಡಿದೆ. ನನ್ನ ಪತಿ ಸ್ಥಳದಲ್ಲೇ ಮೃತಪಟ್ಟರು. ನನ್ನ ಪತಿಯ ಅಂತ್ಯ ಸಂಸ್ಕಾರಕ್ಕೆ ರೂ. 5 ಲಕ್ಷ ಖರ್ಚಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಪತಿ ಎಳನೀರು ವ್ಯಾಪಾರದಿಂದ ತಿಂಗಳಿಗೆ ರೂ. 40 ಸಾವಿರ ಸಂಪಾದಿಸುತ್ತಿದ್ದರು ಎಂದು ತೋರಿಸಲು ದಾಖಲೆ ಮುಂದಿನ ದಿನಾಂಕದಂದು ಹಾಜರುಪಡಿಸಬಲ್ಲೆ. 5ನೇ ಅರ್ಜಿದಾರರು ನನ್ನ ಪತಿಯ ಆಧಾಯದ ಮೇಲೆ ಅವಲಂಬಿತರಾಗಿರಲಿಲ್ಲ ಅಂದರೆ ಸರಿಯಲ್ಲ, 5ನೇ ಅರ್ಜಿದಾರರು ನನ್ನ ತಾಯಿ. ನನ್ನ ಪತಿ ಅಪಘಾತದಿಂದ ಮೃತಪಟ್ಟಿರುವುದರಿಂದ ನನಗೆ ಯಾವುದೇ ಆರ್ಥಿಕ ಮತ್ತು ಮಾನಸಿಕ ನಷ್ಟ ಆಗಿಲ್ಲ ಅಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.